ಶ್ರೀ ಗುರುಭ್ಯೋ ನಮ:

ಗುರುಪರಂಪರಾಸ್ಮರಣೆ

ಗುರು ಮಧ್ವ ರಾಯರಿಗೆ ನಮೋ ನಮೋ| ನಮ್ಮ (1) (1)
ಗುರು ಮಧ್ವ ಸಂತತಿಗೆ ನಮೋ ನಮೋ|| (1) (1)

ಶ್ರೀಪಾದರಾಜರಿಗೆ ಗುರು ವ್ಯಾಸರಾಜರಿಗೆ| (2)
ಗುರು ವಾದಿರಾಜರಿಗೆ ನಮೋ ನಮೋ|| ನಮ್ಮ (1)

ರಾಘವೇಂದ್ರರಾಯರಿಗೆ ವೈಕುಂಠದಾಸರಿಗೆ| (2)
ಪುರಂದರರದಾಸರಿಗೆ ನಮೋ ನಮೋ|| ನಮ್ಮ (1)

ಗುರು ವಿಜಯದಾಸರಿಗೆ ಭಾಗಣ್ಣದಾಸರಿಗೆ| (2)
ರಂಗವೊಲಿದದಾಸರಿಗೆ ನಮೋ ನಮೋ|| ನಮ್ಮ (1)

ಪರಮ ವೈರಾಗ್ಯಶಾಲಿ ತಿಮ್ಮಣ್ಣದಾಸರಿಗೆ | (2)
ಹುಂಡೇಕಾರ ದಾಸರಿಗೆ ನಮೋ ನಮೋ || ನಮ್ಮ (1)

ಗುರುಶ್ರೀಶವಿಠಲನ ಪರಮಭಕ್ತರಚರನ| (2)
ಸರಸಿಜಯುಗಗಳಿಗೆ ನಮೋ ನಮೋ|| ನಮ್ಮ (2)

ದೇವತಾ ಸ್ತೊತ್ರ

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
ಮತಿಪ್ರೇರಿಸುವಳು ಪಾರ್ವತೀದೇವಿ
ಮುಕುತಿಪದವೀವ ಮನ ಮಹರುದ್ರದೇವರು
ಹರಿಭಕುತಿದಾಯಕಳು ಭಾರತೀದೇವೀ
ಯುಕುತಿಶಾಸ್ತ್ರಗಳಲ್ಲಿ ವನಜಸಂಭವನರಸಿ
ಸತ್ಕರ್ಮಗಳ ನಡೆಸಿ ಸುಜ್ಞಾನಮತಿಯಿತ್ತು
ಗತಿ ಪಾಲಿಸುವ ನಮ್ಮ ಪವಮಾನನು |
ಚಿತ್ತದಲಿ ಆನಂದಸುಖವನೀವಳು ರಮಾ
ಭಕುತಜನರೊಡೆಯ ನಮ್ಮ ಪುರಂದರವಿಠ್ಠಲನು
ಸತತ ಇವರೊಳು ನಿಂತು ಈ ಕೃತಿಯ ನಡೆಸುವನು ||

ಶ್ರೀ ರಾಘವೇಂದ್ರಗುರುಸಾರ್ವಭೌಮರು

ಬಾರೋ ಗುರುರಾಘವೇಂದ್ರ (1) (1)
ಬಾರಯ್ಯ ಬಾ ಬಾ (1)

ಹಿಂದುಮುಂದಿಲ್ಲೆನಗೆ ನೀ ಗತಿ
ಎಂದು ನಂಬಿದೆ ನಿನ್ನ ಪಾದವ
ಬಂಧನವ ಬಿಡಿಸೆನ್ನ ಕರಪಿಡಿ
ನಂದಕಂದ ಮುಕುಂದ ಬಂಧೋ || ಬಾರೊ

ಸೇವಕನೆಲೋ ನಾನು ಧಾವಿಸಿ ಬಂದೆನು

ಸೇವೆಯ ನೀಡೆಲೋ ನೀನು
ಸೇವಕನ ಸೇವೆಯನು ಸೇವಿಸಿ
ಸೇವ್ಯಸೇವಕ ಭಾವವೀಯುತ
ಠಾವುಗಾಣಿಸಿ ಪೊರೆಯೋ ಧರೆಯೋಳು
ಪಾವನಾತ್ಮಕ ಕಾವಕರುಣಿ

ಕರೆದರೆ ಬರುವೀಯೆಂದು ಸಾರುವುದು ಡಂಗುರ
ತ್ವರಿತದಿ ಒದಗು ಬಂದು
ಜರಿಯಬೇಡವ್ವೋ ಬರಿದೆ ನಿನ್ನಯ
ವಿರಹ ತಾಳದೆ ಮನದಿ ಕೊರಗುವೆ
ಹರಿಯಸ್ಮರಣೆಯ ನಿರುತದಲಿ
ಎನಗ್ವರುಷದಲಿ ನೀ ನಿರುತ ಕೊಡುತಲಿ

ನರಹರಿಪ್ರಿಯನೇ ಬಾ ಗುರುಶ್ರೀಶವಿಠಲನೆ
ಕರುಣಾಪಾತ್ರನೇ ಬೇಗ ಬಾ
ಗುರುವರನೆ ಪರಿಪೋಷಿಸೆನ್ನನು
ಮರೆಯದೆಲೆ ತವ ಚರಣಕೋಟಿಯಲಿರಿಸಿ
ಚರಣಾಂಬುಜವ ತೋರುತ
ತ್ವರಿತದಲಿ ಓಡೋಡಿ ಬಾ ಬಾ

ಜೀಯಾ ನೀನಲ್ಲದೆ ಇನ್ನಾರು ಕಾಯ್ವರೋ |ಪ| (2) (1)

ರಾಯ ಬಾರೋ ರಾಘವೇಂದ್ರ ಬಾರೋ |ಅ.ಪ|   (2) (2)

ಸಹ್ಲಾದನಣ್ಣನೆ ಬಾರೋ ಪ್ರಹ್ಲಾದ ರಾಯ  ಬಾರೋ    (2)
ಬಾಹ್ಲೀಕ ರಾಜನಾಗಿ ಮೆರೆವಂಥ ಪ್ರಭುವೆ ಬಾರೋ |೧|
(2)

ತುಂಗವಾಸ ಮುನಿಪುಂಗವ ನೀ ಭಕ್ತ   (2)
ಜಂಗುಳಿ ಪಾಲಿಸಲು ಸಂಗೀತ ಪ್ರಿಯನೆ ಬಾರೋ |೨|
(2)

ಶ್ರೀಕರುಣಾಸಿಂಧು ಬಾರೋ ಸಾಕಬೇಕಯ್ಯಾ ಬಂದು   (2)
ಶ್ರೀಕರ ಶ್ರೀದವಿಠ್ಠಲನ ತೋರೊ ಬಾರೋ |೩|      (2)

ಬಂದಾನೋ ರಾಘವೇಂದ್ರ ಇಂದಿಲ್ಲಿಗೆ  (2) (1)
ಕಂದನ ಮೊರೆ ಕೇಳಿ ಜನನಿಯು ಬರುವಂತೆ  (2)

ಗಜವೇರಿ ಬಂದ ಜಗದಿತಾನಿಂದಾ |   (2)
ಅಜಪಿತರಾಮನ ಪಾದಾಬ್ಜ ಸ್ಮರಿಸುತಲಿ   (2)

ಹರಿಯ ಕುಣಿಸುತ ಬಂದಾ ರಾಘವೇಂದ್ರ, ನರಹರಿ ಪ್ರಿಯ
ಬಂದ |   (2)

**ಶರಣಾಗತರನು ಕರವ ಪಿಡಿವೆನೆಂದು (2)**

**ಪ್ರಲ್ಹಾದ ವ್ಯಾಸ ಮುನೀಂದ್ರ ರಾಘವೇಂದ್ರ | (2)**
**ನಿಲ್ಲಿಸುತ ಮನವ ಮಧ್ವೇಶ ವಿಠಲನಲ್ಲಿ || (2)**

**ರಾಘವೇಂದ್ರ ಗುರುರಾಯರ ಸೇವಿಸಿರೋ | (1) (1)**
**ಸೌಖ್ಯದಿ ಜೀವಿಸಿರೋ ||ಪ|| (1)**
**ತುಂಗಾತೀರದಿ ರಘುರಾಮನ ಪೂಜಿಪರೋ | ನರಸಿಂಗರ ಭಜಕರೋ ||ಅ.ಪ||**

**ಶ್ರೀ ಸುಧೀಂದ್ರ ಕರ ಸರೋಜ ಸಂಜಾತ | ಜಗದೊಳಗೆ ಪುನೀತ |**
**ದಾಶರಥಿಯ ದಾಸತ್ವವ ತಾನ್ವಹಿಸಿ | ದುರ್ಮತಗಳ ಜಯಿಸಿ |**
**ಈ ಸಮೀರ ಮತ ಸಂಸ್ಥಾಪಕರಾಗಿ | ನಿಂದಕರನು ನೀಗಿ |**
**ಭೂಸುರರಿಗೆ ಸಂಸೇವ್ಯ ಸದಾಚರಣೀ | ಕಂಗೊಳಿಸುವ ಕರುಣಿ ||೧||**

**ಕುಂದದೆ ವರ ಮಂತ್ರಾಲಯದಲ್ಲಿರುವ | ಕರೆದಲ್ಲಿಗೆ ಬರುವ |**
**ವೃಂದಾವನಗತ ಮೃತ್ತಿಗೆ ಜಲ ಪಾನ | ಮುಕ್ತಿಗೆ ಸೋಪಾನ |**
**ಸಂದರ್ಶನ ಮಾತ್ರದಲಿ ಮಹತ್ಪಾಪ | ಬಡಿದೋಡಿಸಲಾಪ |**

ಮಂದಭಾಗ್ಯರಿಗೆ ದೊರಕದಿರುವ ಸೇವಾ | ಶರಣರ ಸಂಜೀವಾ ||೨||

ಶ್ರೀದವಿಠ್ಠಲನ ಸನ್ನಿಧಾನ ಪಾತ್ರ | ಸಂಸ್ತುತಿಸುವ ಮಾತ್ರ |
ಮೋದಪಡಿಸುತಿಹ ತಾ ನಿಹಪರದಲ್ಲಿ | ಈತಗೆ ಸರಿಯೆಲ್ಲಿ |
ಮೇಧಿನಿಯೊಳಗಿನ್ನರಸಲು ನಾ ಕಾಣೆ | ಪುಸಿಯಲ್ಲೆನ್ನಾಣೆ |
ಪಾದಸ್ಮರಣೆಯ ಮಾಡದವನೆ ಪಾಪಿ | ನಾ ಪೇಳುವೆ ಸ್ವಾಪಿ || ೩||

ರಥವಾನೇರಿದ ರಾಘವೇಂದ್ರ ಸದ್ಗುಣಗಣಸಾಂದ್ರಾ ||ಪ||

ಸತತ ಮಾರ್ಗದಿ ಸಂತತ ಸೇವಿಪರಿಗೆ (2)
ಅತಿಹಿತದಲಿ ಮನೋರಥವ ಕೊಡುವೆನೆಂದು ||ಅ.ಪ|| (1)

ಚತುರ ದಿಕ್ಕು ದಿಕ್ಕುಗಳಲ್ಲಿ ಚರಿಪ ಜನರಲ್ಲಿ (2)
ಮಿತಿಯಿಲ್ಲದೆ ಬಂದೋಲೈಸುತಲಿ ವರವ ಬೇಡುತಲಿ (1)
ನುತಿಸುತ ಪರಿಪರಿ ನತರಾಗಿಹರಿಗೆ (2)
ಗತಿಪೇಳದೆ ಸರ್ವಥಾ ನಾ ಬಿಡೆನೆಂದು ||೧|| (1)

ಅತುಳ ಮಹಿಮನ ದಿನದಲ್ಲಿ ದಿತಿಜ ವಂಶದಲಿ (2)
ಉತ್ಪತ್ತಿಯಾಗಿ ಉಚಿತದಲ್ಲಿ ಉತ್ತಮ ರೀತಿಯಲಿ (1)

ಅತಿಶವಿರುತಿರೆ ಪಿತನ ಬಾಧೆಗೆ   (2)
ಮನ್ಮಥಪಿತನೊಲಿಸಿದ ಜಿತಕರಣದಲಿ ||೨||      (1)

ಪ್ರಥಮ ಪ್ರಲ್ಹಾದ ವ್ಯಾಸಮುನಿಯೆ ಯತಿರಾಘವೇಂದ್ರ   (2)
ಪತಿತೋದ್ಧಾರಿಯೇ ಪಾವನಕಾರಿಯೆ ಕರಮುಗಿವೆನು
ದೊರೆಯೇ   (1)
ಕ್ಷಿತಿಯೊಳು ಗೋಪಾಲವಿಠ್ಠಲನ ಸ್ಮರಿಸುತ   (2)
ಪ್ರತಿಮಂತ್ರಾಲಯದೊಳು ಅತಿ ಮೆರೆವ ||೩||      (1)

## ಘಟಿಕಾಚಲಿದಿ ನಿಂತಾ

ಘಟಿಕಾಚಲಿದಿ ನಿಂತಾ ಹನುಮಂತಾ । ಘಟಿಕಾಚಲದಿ ನಿಂತಾ ॥ ಪ ॥

ಘಟಿಕಾಚಲದಿ ನಿಂತ ಪಟು ಹನುಮಂತನು । ಪಠನೆಯ ಮಾಡಲುತ್ಕಟದಿ ಪೊರೆವೆನೆಂದು ॥ ಅ ಪ ॥

ಚತುರಯುಗದಿ ತಾನು ಮುಖ್ಯಪ್ರಾಣನು। ಚತುರಮುಖನಯ್ಯನ ।
ಚತುರ ಮೂರುತಿಗಳನು ಚತುರತನದಿ ಭಜಿಸಿ ।
ಚತುರ್ಮುಖನಾಗಿ ಜಗಕೆ ಚತುರ್ವಿಧ ಫಲವಕೊಡುತ ॥ ೧ ॥

ಸರಸಿಜಭವಗೋಸ್ಕರ । ಕಲ್ಮಷದೂರ ವರಚಕ್ರ ತೀರ್ಥಸರ ।
ಮೆರೆವಾಚಲದಿ ನಿತ್ಯ ನರಹರಿಗೆದುರಾಗಿ ।
ಸ್ಥಿರಯೋಗಾಸನದಿ ಕರೆದು ವರವಗಳ ಕೊಡುತ ॥ ೨ ॥

ಶಂಖಚಕ್ರವಧರಿಸಿ ಭಕ್ತರ ಮನ । ಪಂಕವ ಪರಿಹರಿಸಿ ।
ಪಂಕಜನಾಭ ಶ್ರೀ ಪುರಂದರವಿಠಲನ ।

## ಜಯ ಕೊಲ್ಹಾಪುರ ನಿಲಯೆ

ಜಯ ಕೊಲ್ಹಾಪುರ ನಿಲಯೆ ಬಜಧಿಷ್ಟೇತರವಿಲಯೆ
ತವ ಪಾದೌ ಹೃದಿ ಕಲಯೆ ರತ್ನ ರಚಿತವಲೆಯೇ

ಜಯ ಜಯ ಸಾಗರಜಾತೆ ಕುರು ಕರುಣಾ ಮಯಿ ಭೀತೆ
ಜಗದಂಬಾಬಿಧ್ಯಾ ತೇ ಜೀವತಿ ತವ ಪೋತೆ

ಜಯ ಜಯ ಸಾಗರ ಸದನಾ ಜಯ ಕಾಂತ್ಯಾ ಜಿತಮದನಾ
ಜಯ ದುಷ್ಟಾಂತಕ ಕದನಾ ಕುಂದಮುಕುಲ ರದನಾ

ಸುರರಮಣೀ ನುತ ಚರಣೇ ಸುಮನಃ ಸಂಕಟ ಹರಣೆ
ಸುಸ್ವರ ರಂಜಿತ ವೀಣೆ ಸುಂದರಿ ನಿಜ ಕಿರಣೆ

ಭಜದಿಂದೀವರ ಸೋಮಾ ಭವಮುಖ್ಯಾಮರಕಾಮಾ
ಭಯಮೂಲಾಳಿವಿರಾಮಾ ಭಂಜಿತ ಮುನಿಭೀಮಾ

ಕುಂಕುಮ ರಂಜಿತಫಾಲೆ ಕುಂಜರ ಬಾಂಧವಲೋಲೆ
ಕಲಧೌತಾಮಲಚ್ಚೈಲೆ ಕೃಂತಕುಜನಜಾಲೆ

ಧೃತಕರುಣಾ ರಸ ಪೂರೆ ಧನದಾನೋತ್ಸವ ಧೀರೆ
ಧ್ವನಿಲವಂದಿತಕೀರೆ ಧೀರೆ ದನುಜದಾರೆ

ಸುರಹೃತ್ಪಞ್ಜರಕೀರಾ ಸುಮಗೇಹಾರ್ಪಿತಹಾರಾ
ಸುಂದರ ಕುಂಜವಿಹಾರ ಸುರವರ ಪರಿವಾರಾ

ವರಕಬರೀಧೃತಕುಸುಮೆ ವರಕನಕಾಧಿಕಸುಷುಮೆ
ವನನಿಲಯಾದಯ ಭೀಮೆ ವದನ ವಿಜಿತ ಸೊಮೆ

ಮದಕಲಭಾಲಸಗಮನೆ ಮಧುಮಥನಾಲಸ ನಯನೆ
ಮೃದುಲೊಲಾಲಕರಚರಣೆ ಮಧುರ ಸರಸ ಗಾನೆ

ವ್ಯಾಘ್ರಪುರೀವರ ನಿಲಯೇ ವ್ಯಾಸಪದಾರ್ಪಿತ ಹೃದಯೆ
ಕುರು ಕರುಣಾ ಮಯಿ ಸದಯೆ ವಿವಿಧ ನಿಗಮ ಗೇಯೆ

## ನೆರೆ ನಂಬಿದೆ ಮದ್ ಹೃದಯ

ನೆರೆ ನಂಬಿದೆ ಮದ್ ಹೃದಯಮಂಟಪದೊಳು ಪರಿಶೋಭಿಸುತಿರು ಪಾಂಡುರಂಗ॥ ಪ ॥
ಶರಣಜನರ ಸಂಸಾರಮಹಾಭಯ ಹರಣ ಕರುಣ ಸಿರಿ ಪಾಂಡುರಂಗ॥ ಅ ಪ ॥

ನೆರೆದಿಹ ಬಹು ಜನರೊಳಿದ್ದರು ಮನ ಸ್ಥಿರವಿದು ನಿನ್ನಲಿ ಪಾಂಡುರಂಗ
ಪರಿಪರಿ ಕೆಲಸವು ನಿನ್ನ ಮಹಾಪೂಜೆ ನಿರುತ ಎನಗೆ ಕೊಡು ಪಾಂಡುರಂಗ ॥ ೧ ॥

ಪರದೇವನೆ ನಿನ್ನ ಲೀಲಾಸ್ಮೃತಿಯನು ನಿರುತ ಎನಗೆ ಕೊಡು ಪಾಂಡುರಂಗ
ಪರರಾಪೇಕ್ಷೆಯ ಬಿಡಿಸಿ ನಿರಂತರ ಪರಗತಿ ಪಥ ತೋರೋ ಪಾಂಡುರಂಗ ॥ ೨ ॥

ಸುಖವಾಗಲಿ ಬಹು ದುಃಖವಾಗಲಿ ಸಖ ನೀನಾಗಿರು ಪಾಂಡುರಂಗ
ನಿಖಿಲಾಂತರ್ಗತ ವ್ಯಾಸವಿಠಲ ತವ ಮುಖಪಂಕಜ ತೋರೋ ಪಾಂಡುರಂಗ ॥ ೩ ॥